# ಶಿವಾನಂದಲಹರೀ

ವಿದ್ವಾನ್ ಹೆಚ್.ವಿ. ನಾಗರಾಜರಾವ್

ಅಜ್ಞಾನಾಂತರ್ಗಹನಪತಿತಾನ್ ಆತ್ಮವಿದ್ಯೋಪದೇಶೈಃ
ತ್ರಾತುಂ ಲೋಕಾನ್ ಭವದವಶಿಖಾತಾಪಪಾಪಚ್ಯಮಾನಾನ್ ।
ಮುಕ್ತ್ವಾ ಮೌನಂ ವಟವಿಟಪಿನೋ ಮೂಲತೋ ನಿಸ್ಸರಂತೀ
ಶಂಭೋರ್ಮೂರ್ತಿರ್ಜಯತಿ ಭುವನೇ
ಶಂಕರಾಚಾರ್ಯರೂಪಾ ।

'ಅಜ್ಞಾನವೆಂಬ ಕಾಡಿನಲ್ಲಿ ಅಲೆದಾಡುತ್ತಿದ್ದ ಜನರು ಸಾಂಸಾರಿಕತೆಯ ದಾವಾಗ್ನಿಯ ಬೇಗೆಯಲ್ಲಿ ಬೆಂದು ಬಸವಳಿಯುತ್ತಿದ್ದಾರೆ. ಅವರನ್ನು ಕಾಪಾಡುವ ಉದ್ದೇಶದಿಂದ ಸಾಕ್ಷಾತ್ ಶಂಕರನೇ ಶಂಕರಾಚಾರ್ಯ ಎಂಬ ರೂಪದಿಂದ ಬಂದು ಆತ್ಮೋಪದೇಶವನ್ನು ಮಾಡುತ್ತಿರುವನು.'

ಆಚಾರ್ಯರ ಕಾಲ ನಮಗೆ ಸರಿಯಾಗಿ ತಿಳಿಯದು. ಅವರು ಏಳನೆಯ ಶತಮಾನದಲ್ಲಿ (೬೩೨–೬೬೪) ಮಾನವ ರೂಪದಲ್ಲಿ ಕಾಣಿಸಿಕೊಂಡಿದ್ದರೆಂದು ಕೆಲವರೂ, ಎಂಟನೆಯ ಶತಮಾನದ ಕೊನೆಯಲ್ಲಿ ಹುಟ್ಟಿ ಒಂಬತ್ತನೆಯ ಶತಮಾನದ ಆದಿಭಾಗದಲ್ಲಿ ಕಣ್ಮರೆಯಾದರೆಂದು (೭೮೦–೮೧೨) ಮತ್ತೆ ಕೆಲವರೂ ಹೇಳುತ್ತಾರೆ. ಆಚಾರ್ಯರ ಗ್ರಂಥಗಳಲ್ಲಿ ಈ ಬಗೆಗೆ ಯಾವ ಸೂಚನೆಯೂ ಸಿಕ್ಕಿಲ್ಲ. ಲೌಕಿಕ ವಿಷಯಗಳು ಅವರಿಗೆ ತೃಣಪ್ರಾಯವಾದುದರಿಂದ ಅವರು ಈ ಬಗೆಗೆ ಮೌನವನ್ನು ವಹಿಸಿರಬಹುದು. ಅವರು ಭೂಲೋಕದಲ್ಲಿ ಇದ್ದುದು ಕೇವಲ ಮೂವತ್ತೆರಡು ವರ್ಷಗಳೆಂಬುದರಲ್ಲಿ ಎಲ್ಲರ ಸಮ್ಮತಿ ಇದೆ.

ಅಷ್ಟವರ್ಷೇ ಚತುರ್ವೇದೀ ದ್ವಾದಶೇ ಸರ್ವಶಾಸ್ತ್ರವಿತ್ ।
ಷೋಡಶೇ ಕೃತವಾನ್ ಭಾಷ್ಯಂ ದ್ವಾತ್ರಿಂಶೇ ಮುನಿರಭ್ಯಗಾತ್॥

ಅಷ್ಟು ಚಿಕ್ಕ ಅವಧಿಯಲ್ಲಿ ಅವರು ಅಪಾರ ಸಾಧನೆಯನ್ನು ಮಾಡಿದರು. ವೇದವೇದಾಂಗಗಳನ್ನು ಹೃದ್ಗತ ಮಾಡಿಕೊಂಡರು. ವೇದಾಂತವೆಂಬ ಹಿಮಾಲಯಪರ್ವತದ ಶಿಖರವನ್ನೇರಿದರು. ಭಗವದ್ಗೀತೆ–ಉಪನಿಷತ್ತುಗಳು–ಬ್ರಹ್ಮಸೂತ್ರಗಳಿಗೆ ಭಾಷ್ಯಗಳನ್ನು ಬರೆದರು. ವಿವೇಕಚೂಡಾಮಣಿ ಮುಂತಾದ ಪ್ರಕರಣ ಗ್ರಂಥಗಳನ್ನೂ ರಚಿಸಿದರು. ಭಾಷ್ಯಗಳು ಪೂರ್ವಜನ್ಮ ಸಂಸ್ಕಾರದಿಂದ ಪರಿಪಕ್ವ ಬುದ್ಧಿಯುಳ್ಳ ಉತ್ತಮಾಧಿಕಾರಿಗಳಿಗೆ ಇಷ್ಟವಾದುವು. ಪ್ರಕರಣಗ್ರಂಥಗಳು ಸ್ವರೂಪಯೋಗ್ಯತೆಯನ್ನು ಹೊಂದಿದ್ದ ಮಧ್ಯಮಾಧಿಕಾರಿಗಳಿಗೆ ರುಚಿಸಿದವು. ಆದರೆ ಅಷ್ಟು ಅರ್ಹತೆಯೂ ಇಲ್ಲದ ಮಂದಾಧಿಕಾರಿಗಳಿಗಾಗಿ, ಎಂದರೆ ಸಾಮಾನ್ಯಜನರಿಗಾಗಿ

ಮಾನ್ಯ ಲೇಖಕರು ಸಂಸ್ಕೃತ ವಿದ್ವಾಂಸರು; ಮೈಸೂರಿನ ಪ್ರಾಚ್ಯ ವಿದ್ಯಾ ಸಂಶೋಧನಾ ಸಂಸ್ಥೆಯ ನಿವೃತ್ತ ಸಂಶೋಧಕರು.



ಅವರು ನೂರಾರು ಸ್ತೋತ್ರಗಳನ್ನು ರಚಿಸಿಕೊಟ್ಟರು. ವಿಷ್ಣು, ಶಿವ, ಶಕ್ತಿ, ಗಣಪತಿ, ಶಾಸ್ತಾ – ಹೀಗೆ ಎಲ್ಲ ದೇವತೆಗಳ ಸ್ತೋತ್ರಗಳನ್ನವರು ಅನುಗ್ರಹಿಸಿದರು. ಶಾರದೆಯ ಸಂಪೂರ್ಣ ಪ್ರಸನ್ನತೆಯಿಂದ ಸರಳವೂ ಸುಭಗವೂ ಆದ ಸಂಸ್ಕೃತಭಾಷೆಯಲ್ಲಿ ಸುಂದರವಾಗಿ ಮೂಡಿಬಂದ ಈ ಸ್ತೋತ್ರಗಳು ಶ್ರೇಷ್ಠ ಕಾವ್ಯಗುಣಗಳನ್ನೂ ಹೊಂದಿವೆ. ಇಂಥ ಕಾವ್ಯಗಳಲ್ಲಿ ಸೊಬಗಿನ ಗಣಿಯಂತೆ ಶೋಭಿಸುವ ರತ್ನ 'ಶಿವಾನಂದಲಹರೀ', ನೂರು ಪದ್ಯಗಳಿರುವ ಸ್ತೋತ್ರಕಾವ್ಯ. ಓದುವುದಕ್ಕೂ ಹಾಡುವುದಕ್ಕೂ ಅದ್ಭುತ – ಇಲ್ಲಿರುವ ಪದವಿನ್ಯಾಸ, ಅರ್ಥಾಲಂಕಾರಗಳ ಅಂದ ಅಪೂರ್ವ. ಸೌಂದರ್ಯಲಹರಿಯಲ್ಲಿ ಜಗಜ್ಜನನಿಯ ಮಹಿಮೆ; ಶಿವಾನಂದಲಹರಿಯಲ್ಲಿ ಶಿವ–ಶಕ್ತಿಯರಿಬ್ಬರಿಗೂ ಭಕ್ತಿಯ ನಮನ. ಇದರ ಮೊದಲನೆಯ ಪದ್ಯವನ್ನು ನೋಡೋಣ:

ಕಲಾಭ್ಯಾಂ ಚೂಡಾಲಂಕೃತಶಶಿಕಲಾಭ್ಯಾಂ ನಿಜತಪಃ–
ಫಲಾಭ್ಯಾಂ ಭಕ್ತೇಷು ಪ್ರಕಟಿತಫಲಾಭ್ಯಾಂ ಭವತು ಮೇ ।
ಶಿವಾಭ್ಯಾಂ ಮಸ್ತೋಕತ್ರಿಭುವನಶಿವಾಭ್ಯಾಂ ಹೃದಿ ಪುನ–
ರ್ಭವಾಭ್ಯಾಮಾನಂದಸ್ಫುರದನುಭವಾಭ್ಯಾಂ ನತಿರಿಯಮ್ ॥

ಶಿವಶಕ್ತಿಯರಿಬ್ಬರಿಗೂ ನಮಸ್ಕಾರ. ಇಬ್ಬರ ಮುಡಿಯಲ್ಲೂ

ಚಂದ್ರನ ಕಲೆ ಶೋಭಿಸುತ್ತಿದೆ. ಇವರ ವಿಶೇಷವೆಂದರೆ ಪರಸ್ಪರರ ಪ್ರಾಪ್ತಿಗಾಗಿ ಇಬ್ಬರೂ ತಪಸ್ಸನ್ನು ಮಾಡಿದರು! **'ಪರಸ್ಪರತಪಸ್ಸಂಪತ್ ಫಲಾಯಿತ ಪರಸ್ಪರೌ'**– ಶಿವನು ತನಗೆ ಸಿಕ್ಕಬೇಕೆಂದು ಪಾರ್ವತಿ, ಪಾರ್ವತಿ ತನಗೆ ಸಿಕ್ಕಬೇಕು ಎಂದು ಶಿವ ತಪಸ್ಸು ಮಾಡಿದರು. ಭಕ್ತರಲ್ಲಿ ಅವರ ತಪಸ್ಸಿನ ಫಲ ಪ್ರಕಟಗೊಂಡಿತು. ಸಮಸ್ತ ತ್ರಿಭುವನಗಳಿಗೂ ಅವರಿಂದ 'ಶಿವ' ಎಂದರೆ ಮಂಗಳ ಉಂಟಾಯಿತು. ಆನಂದ ಸ್ಫುರಿಸುವ ಅನುಭವವನ್ನೇ ಸ್ವರೂಪವಾಗಿ ಉಳ್ಳ ಈ ಶಿವ ಮತ್ತು ಶಿವೆ ಎಲ್ಲ ಭಕ್ತರ ಹೃದಯದಲ್ಲಿ ಸದಾ ಇರುವವರು. ಇವರಿಗಲ್ಲದೆ ಮತ್ತಾರಿಗೆ ನಮಸ್ಕಾರ ಸಲ್ಲುವುದು?

ಇದು ನಮಸ್ಕಾರ ರೂಪವಾದ ಮಂಗಳ. ಸಮಸ್ತ ಸ್ತೋತ್ರವೂ ಮಂಗಳಮಯವಾಗಿದೆ. ಎರಡನೆಯ ಪದ್ಯದಲ್ಲಿ ಸ್ತೋತ್ರದ ಹೆಸರನ್ನು ನಮೂದಿಸಿದ್ದಾರೆ:

**ಗಲಂತೀ ಶಂಭೋ ತ್ವಚ್ಚರಿತಸರಿತಃ ಕಿಲ್ಬಿಷರಜೋ**
**ದಲಂತೀ ಧೀಕುಲ್ಯಾಸರಣಿಷು ಪತಂತೀ ವಿಜಯತಾಮ್ ।**
**ದಿಶಂತೀ ಸಂಸಾರಭ್ರಮಣಪರಿತಾಪೋಪಶಮನಂ।**
**ವಸಂತೀ ಮಚ್ಚೇತೋಹ್ರದಭುವಿ ಶಿವಾನಂದಲಹರೀ॥**

ಲಹರೀ ಎಂದರೆ ಅಲೆ. ಶಿವನ ಧ್ಯಾನದಿಂದ ಉಂಟಾಗುವ ಆನಂದ ಅಲೆಅಲೆಯಾಗಿ ಹೊಮ್ಮುತ್ತಿದೆ. ಶಂಭೋ, ಅದು ನಿನ್ನ ಚರಿತ್ರವೆಂಬ ನದಿಯಿಂದ ಚಿಮ್ಮುತ್ತಿದೆ. ಕಿಲುಬಿನಂತೆ ಕಟ್ಟಿಕೊಂಡಿರುವ ರಜೋಗುಣವನ್ನು ಅದು ತೊಳಗಿಸುತ್ತದೆ. ಬುದ್ಧಿಯ ಕಾಲುವೆಗಳಲ್ಲಿ ಹರಿಯುತ್ತದೆ. ಸಂಸಾರದಲ್ಲಿ ಅಲೆದಲೆದು ಸೊರಗಿದವರಿಗೆ ನನ್ನ ಮನಸ್ಸೆಂಬ ಸರೋವರದಲ್ಲಿ ಈ ಲಹರಿಯು ಎದ್ದೆದ್ದು ವಿಜಯವನ್ನು ಪಡೆಯಲಿ ಎನ್ನುತ್ತಾರೆ ಶ್ರೀಶಂಕರಾಚಾರ್ಯರು.

ಈ ಎರಡೂ ಪದ್ಯಗಳೂ ಶಿಖರಿಣೀ ಛಂದಸ್ಸಿನಲ್ಲಿವೆ. ಲಹರಿಯು ಶಿಖರದಿಂದ ಧುಮುಕಿ ಹರಿಯುತ್ತಾ ಸರೋವರ ವನ್ನು ತುಂಬಿಸುತ್ತದೆ ಎಂಬ ಧ್ವನಿ ಇಲ್ಲಿ ಮಾರ್ದನಿಸುತ್ತಿದೆ. ಇಪ್ಪತ್ತೇಳನೆಯ ಪದ್ಯದವರೆಗೂ ಈ ಛಂದಸ್ಸೇ ಮುಂದು ವರಿದಿದೆ.

ಆಚಾರ್ಯರ ಕಾಲದಲ್ಲಿ ಪಂಡಿತರ ತರ್ಕದ ಆರ್ಭಟ ಅತಿಯಾಗಿತ್ತು. ತಾರ್ಕಿಕರು ಘಟ, ಪಟ ಮುಂತಾದ ಶಬ್ದಗಳನ್ನು ಬಳಸಿ, ಘಟಾಟೋಪವನ್ನು ಮಾಡಿ ವಿಜೃಂಭಿಸುತ್ತಿದ್ದರು. ಇಂಥ ಶಬ್ದಝರಿಯೂ ವಾಗ್ವೈಖರಿಯೂ ಹೊಟ್ಟೆಪಾಡಿಗೆ ಅನುಕೂಲವಾಗಬಹುದು, ಭಗವಂತನ ಬಳಿಗೆ ಹೋಗಲು ಇವುಗಳಿಂದ ವಿಘ್ನವೇ ಆಗಬಹುದು ಎಂದು ಆಚಾರ್ಯ ಶಂಕರರು ಆರನೆಯ ಪದ್ಯದಲ್ಲಿ ಎಚ್ಚರಿಸಿದ್ದಾರೆ.

**ಘಟೋ ವಾ ಮೃತ್ಪಿಂಡೋಽಪ್ಯಣುರಪಿ ಚ ಧೂಮೋಽಗ್ನಿರಚಲಃ**
**ಪಟೋ ವಾ ತಂತುರ್ವಾ ಪರಿಹರತಿ ಕಿಂ ಘೋರಶಮನಮ್ ।**
**ವೃಥಾ ಕಂಠಕ್ಷೋಭಂ ವಹಸಿ ತರಸಾ ತರ್ಕವಚಸಾ**
**ಪದಾಂಭೋಜಂ ಶಂಭೋರ್ಭಜ ಪರಮಸೌಖ್ಯಂ ವ್ರಜ ಸುಧೀಃ ॥**

"ಇದು ಘಟವೋ, ಕೇವಲ ಮಣ್ಣಿನ ಮುದ್ದೆಯೋ ಅಥವಾ ಅಣುಗಳೊ? ಹೊಗೆ–ಬೆಂಕಿ–ಬೆಟ್ಟಗಳ ಸಂಬಂಧವೇನು? ಬಟ್ಟೆಯೂ ದಾರಗಳೂ ಒಂದೇ ಅಥವಾ ಬೇರೆಬೇರೆಯೋ? ಈ ಚರ್ಚೆ ಘೋರವಾದ ಸಾವನ್ನು ತಪ್ಪಿಸುವುದೇ? ವ್ಯರ್ಥ ವಾಗಿ ಕಂಠಶೋಷಣೆಯನ್ನೇಕೆ ಮಾಡಿಕೊಳ್ಳುವೆ? ಶಿವನ ಅಡಿದಾವರೆಗಳನ್ನು ಪೂಜಿಸಿ ಪರಮಸುಖರೂಪದ ಮೋಕ್ಷವನ್ನು ಪಡೆದುಕೋ" ಎಂದು ಈ ಪದ್ಯದ ತಾತ್ಪರ್ಯ.

**ಸಂಪ್ರಾಪ್ತೇ ಸಂನಿಹಿತೇ ಮರಣೇ ನಹಿ ನಹಿ ರಕ್ಷತಿ ಡುಕೃಞ್ ಕರಣೇ** – ಎಂದು ಭಜಗೋವಿಂದ ಸ್ತೋತ್ರದಲ್ಲೂ ಇದು ಪ್ರತಿಧ್ವನಿತವಾಗಿದೆ. ಶಾಸ್ತ್ರಪಾಂಡಿತ್ಯಕ್ಕಾಗಿ ಭಗವಂತನನ್ನು ಮರೆಯಬಾರದೆಂಬುದು ಇಲ್ಲಿನ ಉಪದೇಶ. ಭಗವದ್ ಭಕ್ತಿ ಇಲ್ಲದೆ ಇದ್ದಾಗ ಸಮಸ್ತ ಶಾಸ್ತ್ರಗಳ ಪಠನವೂ ಕೇವಲ ಕಂಠ ಶೋಷಣೆ ಎಂಬುದನ್ನು ಎಲ್ಲರೂ ಅರಿತುಕೊಳ್ಳಬೇಕು.

ಸಾಮಾನ್ಯ ಕವಿಗಳು ಕಷ್ಟಪಟ್ಟು ಅರ್ಥಗಳನ್ನು ಶಬ್ದಗಳನ್ನು ಹುಡುಕುತ್ತಾರೆ. ಅಪೂರ್ವವಾದ ಅರ್ಥಗಳೂ, ಅವುಗಳಿಗೆ ಅನುಗುಣವಾದ ಪದಪುಂಜಗಳೂ ತಾವಾಗಿ ಮಹಾಕವಿ ಗಳನ್ನು ಹುಡುಕಿಕೊಂಡು ಬರುತ್ತವೆ. ಶಿವಾನಂದಲಹರಿಯ ಇಪ್ಪತ್ತನೆಯ ಪದ್ಯ ಇದಕ್ಕೆ ಸಾಕ್ಷಿಯಾಗಿದೆ.

**ನದೀ ಮೋಹಾಟವ್ಯಾಂ ಚರತಿ ಯುವತೀನಾಂ ಕುಚಗಿರೌ**
**ನಟತ್ಯಾಶಾಶಾಖಾಸ್ವಟತಿ ಝಟಿತಿ ಸ್ವೈರಮಭಿತಃ ।**
**ಕಪಾಲಿನ್ ಭಿಕ್ಷೋ ಮೇ ಹೃದಯಕಪಿಮತ್ಯಂತಚಪಲಂ**
**ದೃಢಂ ಭಕ್ತ್ಯಾ ಬದ್ಧ್ವಾ ಶಿವ ಭವದಧೀನಂ ಕುರು ವಿಭೋ ॥**

"ಅಯ್ಯಾ ಕಪಾಲಿ, ಭಿಕ್ಷು, ಶಿವ, ನನ್ನ ಮನಸ್ಸೆಂಬ ಕಪಿ ಮೋಹದ ಅಡವಿಯಲ್ಲಿ ಅಲೆದಾಡುತ್ತಿದೆ. ಯುವತಿಯರ ಸೌಂದರ್ಯದ ಮೇಲೆ ಕುಣಿಯುತ್ತಿದೆ. ಆಶೆಗಳ ಕೊಂಬೆಗಳ ಮೇಲೆ ಇಷ್ಟಬಂದಂತೆ ಎಗರಾಡುತ್ತಿದೆ. ಈ ಕಪಿಯನ್ನು ಹಿಡಿದು ಭಕ್ತಿಯಿಂದ ಭದ್ರವಾಗಿ ಕಟ್ಟಿಹಾಕಿ ನಿನ್ನ ಅಧೀನದಲ್ಲಿ ಇಟ್ಟುಕೊಳ್ಳಯ್ಯಾ."

ಈ ಪದ್ಯದಲ್ಲಿ ಸಾವಯವ ರೂಪಕವೆಂಬ ಅಲಂಕಾರ ಮನೋಜ್ಞವಾಗಿದೆ. ಕಪಿಯ ಆಟಗಳನ್ನೂ ಓಟಗಳನ್ನೂ ಧ್ವನಿಸುವ ಅಲಂಕಾರಾನುಪ್ರಾಸ ಅಪ್ರಯತ್ನವಾಗಿ ಸಿದ್ಧಿಸಿ, ಆಚಾರ್ಯರ ಕಾವ್ಯಶಕ್ತಿಗೆ ದ್ಯೋತಕವಾಗಿದೆ.

ಇಪ್ಪತ್ತೆಂಟನೆಯ ಪದ್ಯದಿಂದ ನಲವತ್ತಮೂರನೆಯ ಪದ್ಯದವರೆಗೆ ಶಾರ್ದೂಲವಿಕ್ರೀಡಿತ ಎಂಬ ಛಂದಸ್ಸು ಬರುತ್ತದೆ. ಇಪ್ಪತ್ತೆಂಟನೆಯ ಪದ್ಯದಲ್ಲಿ ಸಾರೂಪ್ಯ, ಸಾಮೀಪ್ಯ, ಸಾಲೋಕ್ಯ, ಸಾಯುಜ್ಯ ಎಂಬ ಚತುರ್ವಿಧ ಮೋಕ್ಷಗಳೂ ಶಂಭುವಿನ ಅನುಗ್ರಹದಿಂದ ಉಂಟಾಗುತ್ತವೆ ಎಂದು ಸುಂದರವಾಗಿ ನಿರೂಪಿಸಲಾಗಿದೆ.

ಸಾರೂಪ್ಯಂ ತವ ಪೂಜನೇ ಶಿವ ಮಹಾದೇವೇತಿ ಸಂಕೀರ್ತನೇ
ಸಾಮೀಪ್ಯಂ ಶಿವಭಕ್ತಿಧುರ್ಯಜನತಾಸಾಂಗತ್ಯಸಂಭಾಷಣೇ ।
ಸಾಲೋಕ್ಯಂ ಚ ಚರಾಚರಾತ್ಮಕತನುಧ್ಯಾನೇ ಭವಾನೀಪತೇ
ಸಾಯುಜ್ಯಂ ಮಮ ಸಿದ್ಧಮತ್ರ ಭವತಿ
ಸ್ವಾಮಿನ್ ಕೃತಾರ್ಥೋಽಸ್ಮ್ಯಹಮ್॥

"ಪಾರ್ವತೀಪತಿ, ನಿನ್ನ ಪೂಜೆಯಿಂದ ನನಗೆ ಸಾರೂಪ್ಯ ಮುಕ್ತಿ; 'ಶಿವ ಮಹಾದೇವ' ಎಂಬ ನಾಮಸಂಕೀರ್ತನೆಯನ್ನು ನಾನು ಮಾಡುವುದರಿಂದ ನನಗೆ ಸಾಮೀಪ್ಯ ಮುಕ್ತಿ; ಶಿವಭಕ್ತರ ಸಂಗಮದಿಂದ ಮತ್ತು ಅವರೊಡನೆ ಸಂಭಾಷಣೆ ಮಾಡಿದುದರಿಂದ ಸಾಲೋಕ್ಯ ಮುಕ್ತಿ; ಚರಾಚರಾತ್ಮಕವಾದ ನಿನ್ನ ಧ್ಯಾನದಿಂದ ನನಗೆ ಸಾಯುಜ್ಯಮುಕ್ತಿ. ಸ್ವಾಮಿ, ನಿನ್ನಲ್ಲಿ ಭಕ್ತಿಯನ್ನಿಟ್ಟು ನಾನು ಕೃತಾರ್ಥನಾದೆನು."

ಸಾರೂಪ್ಯ ಮುಕ್ತಿ ಎಂದರೆ ಮುಕ್ತರೂ ಭಗವಂತನ ರೂಪವನ್ನೇ ಪಡೆದುಕೊಳ್ಳುವ ಸ್ಥಿತಿ. ಸಾಮೀಪ್ಯ ಮುಕ್ತಿ ಎಂದರೆ ಮುಕ್ತರು ಭಗವಂತನ ಬಳಿಯೇ ಇರುವ ಸ್ಥಿತಿ. ಸಾಲೋಕ್ಯ ಎಂದರೆ ಭಗವಂತನಿರುವ ಲೋಕದಲ್ಲೇ ಮುಕ್ತರೂ ವಾಸಮಾಡುವುದು. ಸಾಯುಜ್ಯವೆಂದರೆ ಭಗವಂತನಲ್ಲಿಯೇ ಲೀನವಾಗುವುದು. ಈ ನಾಲ್ಕು ಪ್ರಕಾರದ ಮುಕ್ತಿಗಳನ್ನು ಶಾಸ್ತ್ರಗಳಲ್ಲಿ ಹೇಳಿದ್ದಾರೆ.

ಶಿವನು ಕಿರಾತನ ವೇಷವನ್ನು ಧರಿಸಿದ ಪ್ರಸಂಗ ಎಲ್ಲರಿಗೂ ಗೊತ್ತು. 'ಕಿರಾತಾರ್ಜುನೀಯ' ಎಂಬ ಕಾವ್ಯವೇ ಪ್ರಸಿದ್ಧವಾಗಿದೆ. ಹೀಗೆ ಕಿರಾತನೇ ನೀನಾಗಿದ್ದರೂ ಬಂದು ನನ್ನ ಮನಸ್ಸಿನಲ್ಲಿ ನೆಲೆಸು. ನನ್ನ ಮನಸ್ಸೆಂಬ ಕಾಡಿನಲ್ಲಿರುವ ಮದ, ಮಾತ್ಸರ್ಯ, ಮೋಹ ಮುಂತಾದ ಮೃಗಗಳನ್ನು ಬೇಟೆಯಾಡಿ ಕೊಂದು ಬಿಡು ಎಂದು ಆಚಾರ್ಯರು ನಲವತ್ತಮೂರನೆಯ ಪದ್ಯದಲ್ಲಿ ಭಗವಂತನನ್ನು ಕೇಳಿಕೊಂಡಿದ್ದಾರೆ.

ಮಾ ಗಚ್ಛ ತ್ವಮಿತಸ್ತತೋ ಗಿರಿಶ ಭೋ ಮಯ್ಯೇವ ವಾಸಂ ಕುರು
ಸ್ವಾಮಿನ್ನಾದಿಕಿರಾತ ಮಾಮಕಮನಃ ಕಾಂತಾರ ಸೀಮಾಂತರೇ।
ವರ್ತಂತೇ ಬಹುಶೋ ಮೃಗಾ
ಮದಜುಷೋ ಮಾತ್ಸರ್ಯಮೋಹಾದಯ–
ಸ್ತಾನ್ ಹತ್ವಾ ಮೃಗಯಾವಿನೋದರುಚಿತಾಲಾಭಂ ಚ ಸಂಪ್ರಾಪ್ಸ್ಯಸಿ॥

ಶಿವನು ಯಾರ ಮನಸ್ಸಿನಲ್ಲಿರುವನೋ ಅವರಲ್ಲಿ ಮೋಹ, ಮಾತ್ಸರ್ಯ, ಕಾಮ, ಕ್ರೋಧ, ಲೋಭ, ಮದ ಎಂಬ ಅರಿಷಡ್ವರ್ಗಗಳು ಇರಲಾರವು. ಮೋಹಾದಿ ಮೃಗಗಳಿಗೆ ಶಿವನು ಕಿರಾತ ಎಂದರೆ ಬೇಟೆಗಾರ.

ಶರಣೆ ಅಕ್ಕಮಹಾದೇವಿಗೆ ಶ್ರೀಶೈಲದ ಮಲ್ಲಿಕಾರ್ಜುನ ಆರಾಧ್ಯದೈವವೆಂಬುದು ಕನ್ನಡಿಗರಿಗೆಲ್ಲ ಗೊತ್ತು. ಶಿವನ ಈ ಸ್ವರೂಪವನ್ನು 'ಶಿವಾನಂದಲಹರಿ' ಯಲ್ಲಿ ನಾವು ಕಾಣಬಹುದು. ಐವತ್ತನೆಯ ಪದ್ಯದಲ್ಲಿ ಹೀಗೆ ಹೇಳಿದೆ:

ಸಂಧ್ಯಾರಾಮವಿಜೃಂಭಿತಂ ಶ್ರುತಿಶಿರಃಸ್ಥಾನಾಂತರಾಧಿಷ್ಠಿತಂ
ಸಪ್ರೇಮಭ್ರಮರಾಭಿರಾಮಸಕೃತ್ ಸದ್ವಾಸನಾಶೋಭಿತಮ್।
ಭೋಗೀಂದ್ರಾಭರಣಂ ಸಮಸ್ತಸುಮನಸಃ
ಪೂಜ್ಯಂ ಗುಣಾವಿಷ್ಕೃತಂ
ಸೇವೇ ಶ್ರೀಗಿರಿಮಲ್ಲಿಕಾರ್ಜುನಮಹಾಲಿಂಗಂ ಶಿವಾಲಿಂಗಿತಮ್॥

ಶ್ರೀಗಿರಿ ಎಂದರೆ ಶ್ರೀಶೈಲ. ಸಂಧ್ಯಾಕಾಲದಲ್ಲಿ ಅರಳುವ ಮಲ್ಲಿಗೆಗಳ ಉದ್ಯಾನದಲ್ಲಿ ಮಲ್ಲಿಕಾರ್ಜುನ ಶೋಭಿಸುತ್ತಿದ್ದಾನೆ. ಶ್ರುತಿಶಿರಸ್ ಎಂದರೆ ವೇದಾಂತ. ವೇದಾಂತಗಳಲ್ಲಿ ಅವನ ಅಧಿಷ್ಠಾನ. ಪ್ರೀತಿಯಿಂದ ಸುತ್ತುವ ಭ್ರಮರಗಳಿಂದಲೂ ಅಥವಾ ಭ್ರಮರಾಂಬಿಕೆಯಿಂದಲೂ ಅವನು ಸುಂದರವಾಗಿ ಕಾಣಿಸುತ್ತಾನೆ, ಸೌರಭದಿಂದ ಕಂಗೊಳಿಸುತ್ತಾನೆ. ಹಾವುಗಳ ಒಡೆಯನೇ ಅವನ ಒಡವೆ. ಎಲ್ಲ ಪುಷ್ಪಗಳಿಂದ ಮತ್ತು ಎಲ್ಲ ದೇವತೆಗಳಿಂದ ಅವನ ಪೂಜೆ ನೆರವೇರುತ್ತದೆ. ಪಾರ್ವತಿಯಿಂದ ಒಡಗೂಡಿದ ಶ್ರೀಶೈಲಮಲ್ಲಿಕಾರ್ಜುನನಿಗೆ ನಮ್ಮ ಸೇವೆ ಸಲ್ಲಲಿ – ಇದು ಈ ಪದ್ಯದ ತಾತ್ಪರ್ಯ.

ಶ್ರೀರಾಮಕೃಷ್ಣ ಪರಮಹಂಸರು ಹೇಳುತ್ತಿದ್ದರು: "ಯಾರಿಗೆ ನಿಜವಾಗಿ ದೇವರು ಬೇಕೋ ಅವರಿಗೆ ಸಿಕ್ಕುತ್ತಾನೆ" ಎಂದು. ದೇವರು ನಮಗೆ ಕಾಣಿಸಲಿಲ್ಲ ಎಂದು ದೂರುವವನು ಅವನನ್ನು ನೋಡಬೇಕೆಂಬ ಉತ್ಕಟ ಬಯಕೆಯನ್ನು ಹೊಂದಿದ್ದರೆ ಹೇಗಿರುತ್ತದೆ? ಶ್ರೀಶಂಕರಾಚಾರ್ಯರು ಶಿವಾನಂದ ಲಹರಿಯಲ್ಲಿ ಅಂಥ ಬಯಕೆಯನ್ನು, ಆಕಾಂಕ್ಷೆಯನ್ನು ಐವತ್ತೊಂಬತ್ತನೆಯ ಪದ್ಯದಲ್ಲಿ ತೋರಿಸಿದ್ದಾರೆ:

ಹಂಸಃ ಪದ್ಮವನಂ ಸಮಿಚ್ಛತಿ ಯಥಾ ನೀಲಾಂಬುದಂ ಚಾತಕಃ
ಕೋಕಃ ಕೋಕನದಪ್ರಿಯಂ ಪ್ರತಿದಿನಂ
ಚಂದ್ರಂ ಚಕೋರಸ್ತಥಾ ।
ಚೇತೋ ವಾಂಛತಿ ಮಾಮಕಂ ಪಶುಪತೇ
ಚಿನ್ಮಾರ್ಗಮೃಗ್ಯಂ ವಿಭೋ
ಗೌರೀನಾಥ ಭವತ್ ಪದಾಬ್ಜಯುಗಲಂ ಕೈವಲ್ಯಸೌಖ್ಯಪ್ರದಮ್॥

'ಹಂಸವು ತಾವರೆಕೆರೆಯನ್ನು ಇಷ್ಟಪಡುವಂತೆ, ಚಾತಕ ಪಕ್ಷಿಯು ಮೋಡಕ್ಕಾಗಿ ಕಾತರಿಸುವಂತೆ, ಚಕ್ರವಾಕವು ನೇಸರನನ್ನು ನೋಡಲು ಬಯಸುವಂತೆ, ಚಕೋರವು ಚಂದ್ರನನ್ನು ಪ್ರೀತಿಸುವಂತೆ, ನನ್ನ ಮನಸ್ಸು ನಿನ್ನ ಪಾದಕಮಲಕ್ಕಾಗಿ ಅಭಿಲಾಷೆ ಪಡುತ್ತಿದೆ. ಪಶುಪತಿ, ಗೌರೀನಾಥ, ಕರುಣಿಸು.'

'ಭಕ್ತಿ ಎಂದರೇನು?' ಎಂಬ ಪ್ರಶ್ನೆಗೆ ಅರವತ್ತೊಂದನೆಯ ಪದ್ಯದಲ್ಲಿ ಶಂಕರರು ಕೊಟ್ಟಿರುವ ಉತ್ತರ ಇಂತಿದೆ:

ಅಂಕೋಲಂ ನಿಜಬೀಜಸಂತತಿರಯಸ್ಕಾಂತೋಪಲಂ ಸೂಚಿಕಾ
ಸಾಧ್ವೀ ನೈಜವಿಭುಂ ಲತಾ ಕ್ಷಿತಿರುಹಂ ಸಿಂಧುಃ ಸರಿದ್ವಲ್ಲಭಮ್ ।
ಪ್ರಾಪ್ನೋತೀಹ ಯಥಾ ತಥಾ ಪಶುಪತೇಃ ಪಾದಾರವಿಂದದ್ವಯಂ
ಚೇತೋವೃತ್ತಿರುಪೇತ್ಯ ತಿಷ್ಠತಿ ಸದಾ ಸಾ ಭಕ್ತಿರಿತ್ಯುಚ್ಯತೇ ॥

'ಅಂಕೋಲೆ ಗಿಡವನ್ನು ಬೀಜಗಳು ಆಶ್ರಯಿಸಿರುವಂತೆ, ಅಯಸ್ಕಾಂತಕ್ಕೆ ಸೂಜಿ ಅಂಟಿಕೊಂಡಿರುವಂತೆ, ಬಳ್ಳಿ ಮರವನ್ನು ತಬ್ಬಿ ಹಿಡಿದಿರುವಂತೆ, ನದಿಯು ಸದಾ ಕಡಲಿನ ಕಡೆಗೆ

ಹೋಗುವಂತೆ, ಮನಸ್ಸು ಪಶುಪತಿಯ ಪಾದಕಮಲವನ್ನೇ ನೆನೆಯುತ್ತಿರುವ ಸ್ಥಿತಿಯೇ ಭಕ್ತಿ.'

ಬೇಡರ ಕಣ್ಣಪ್ಪನ ಕಥೆ ಎಲ್ಲರಿಗೂ ಗೊತ್ತು. ಅವನಿಗೆ ನಾಗರಿಕ ಸಮಾಜದ ರೀತಿನೀತಿಗಳು ತಿಳಿಯವು. ಶಿವನಲ್ಲಿ ಭಕ್ತಿ ಮಾತ್ರ ಅಚಲ. ಶಿವಲಿಂಗದ ಮೇಲೆ ಧೂಳಿದೆಯೆಂದು ತೊಳೆಯಲು ಎಂಜಲು ನೀರನ್ನು ಅವನು ಉಗಿಯುತ್ತಾನೆ. ತಾನು ತಿಂದು ಮಿಗಿಸಿದ ಮಾಂಸವನ್ನು ಶಿವನಿಗೆ ಅರ್ಪಿಸುತ್ತಾನೆ. ಅವನ ಮುಗ್ಧ ಭಕ್ತಿ ಶಿವನಿಗೆ ಅತ್ಯಂತ ಪ್ರಿಯವಾಗುತ್ತದೆ. ಇದನ್ನು ಆಚಾರ್ಯರು ಅರವತ್ತಮೂರನೆಯ ಪದ್ಯದಲ್ಲಿ ಹೀಗೆ ಬಣ್ಣಿಸಿದ್ದಾರೆ:

ಮಾರ್ಗಾವರ್ತಿತಪಾದುಕಾ ಪಶುಪತೇರಂಗಸ್ಯ ಕೂರ್ಚಾಯತೇ
ಗಂಡೂಷಾಂಬುನಿಷೇಚನಂ ಪುರರಿಪೋರ್ದಿವ್ಯಾಭಿಷೇಕಾಯತೇ ।
ಕಿಂಚಿದ್ ಭಕ್ಷಿತ ಮಾಂಸಶೇಷಕಲಂ ನವ್ಯೋಪಹಾರಾಯತೇ
ಭಕ್ತಿಃ ಕಿಂ ನ ಕರೋತ್ಯಹೋ ವನಚರೋ ಭಕ್ತಾವತಂಸಾಯತೇ ॥

'ದಾರಿಯಲ್ಲಿ ಧೂಳು ಹಿಡಿದ ಪಾದರಕ್ಷೆ ಪಶುಪತಿಗೆ ಚಾಮರವಾಯಿತು. ಎಂಜಲು ನೀರನ್ನು ಎರಚಿದ್ದು ಭಗವಂತನಿಗೆ ಅಭಿಷೇಕವಾಯಿತು. ತಿಂದು ಮಿಕ್ಕ ಮಾಂಸದ ಚೂರು ಶಿವನಿಗೆ ನೈವೇದ್ಯವಾಯಿತು. ಭಕ್ತಿ ಏನನ್ನು ತಾನೇ ಮಾಡಲಾರದು? ಬೇಡನು ಭಕ್ತಶಿಖಾಮಣಿಯಾದ.'

ಅರವತ್ತೇಳರಿಂದ ಮುಂದಿನ ಪದ್ಯಗಳು ವಿವಿಧ ಛಂದಸ್ಸುಗಳಲ್ಲಿವೆ.

ಭಕ್ತರಿಗೆ ಭಗವಂತನಲ್ಲಿ ಸಲಿಗೆ. ಅವನನ್ನು ಅವರು ಹಾಸ್ಯಕ್ಕೆ ಒಳಪಡಿಸುವುದೂ ಉಂಟು. ಹಾಗೆ ಅವರು ಮಾಡುವುದು ತಮ್ಮ ಭಕ್ತಿಯ ದೃಢೀಕರಣಕ್ಕಾಗಿ. ಹೀಗೆ ಹಾಸ್ಯಮಯವಾದುದು ಶಿವಾನಂದಲಹರಿಯ ಎಂಬತ್ತೇಳನೆಯ ಪದ್ಯ.

ಅಶನಂ ಗರಲಂ ಫಣೀ ಕಲಾಪೋ
ವಸನಂ ಚರ್ಮ ಚ ವಾಹನಂ ಮಹೋಕ್ಷಃ ।
ಮಮ ದಾಸ್ಯಸಿ ಕಿಂ ಕಿಮಸ್ತಿ ಶಂಭೋ
ತವ ಪಾದಾಂಬುಜಭಕ್ತಿಮೇವ ದೇಹಿ ॥

'ಶಿವನೆ, ನಿನ್ನ ಆಹಾರ ವಿಷ, ಅಲಂಕಾರ ಹಾವು, ಬಟ್ಟೆಯೇ ಚರ್ಮ, ವಾಹನ ಮುದಿ ಎತ್ತು. ನಿನಗೇ ಏನೂ ಅಲ್ಲ. ಇನ್ನು ನನಗೇನು ಕೊಡುವೆ? ನಿನ್ನ ಪಾದಕಮಲಗಳಲ್ಲಿ ಭಕ್ತಿ ಕೊಡು.'

ಹೀಗೆ ನಾನಾ ವಿಧವಾಗಿ ಪ್ರಾರ್ಥಿಸಿದ ಆಚಾರ್ಯರು ಭಗವಂತನ ಪೂಜೆಯಲ್ಲಿ ತೊಡಗಿದ ಇಂದ್ರಿಯಗಳು ಮಾತ್ರ ಸಾರ್ಥಕ ಎಂದು ಹೃದಯಂಗಮವಾಗಿ ಒಂದು ಪದ್ಯದಲ್ಲಿ ಪ್ರತಿಪಾದಿಸುತ್ತಾರೆ.

ಸಾ ರಸನಾ ತೇ ನಯನೇ ತಾವೇವ ಕರೌ ಸ ಏವ ಕೃತಕೃತ್ಯಃ
ಯಾ ಯೇ ಯೌ ಯೋ ಭರ್ಗಂ
ವದತೀಕ್ಷೇತೇ ಸದಾರ್ಚತಃ ಸ್ಮರತಿ ॥

'ಯಾವುದು ಶಿವನ ನಾಮವನ್ನು ಹೇಳುವುದೋ ಅದೇ ನಾಲಿಗೆ. ಯಾವುವು ನೋಡುವುವೋ ಅವೇ ಕಣ್ಣುಗಳು. ಯಾವುವು ಶಿವನನ್ನು ಪೂಜಿಸುವುವೋ ಅವೇ ಕೈಗಳು. ಯಾವನು ಸದಾ ಶಿವನನ್ನು ಸ್ಮರಿಸುವನೋ ಅವನೇ ಧನ್ಯ.'

ಹೀಗೆ ಹೇಳಿದ ಕವಿಶ್ರೇಷ್ಠ ಶಂಕರರು ತಮ್ಮ ಕವಿತೆಯೆಂಬ ಮಗಳನ್ನು ಶಿವನಿಗೆ ಅರ್ಪಿಸುತ್ತಾರೆ. ರಚಿಸಿದ ಕವಿತೆಯೇ ಕನ್ಯೆ. ಮದುವೆ ಮಾಡಿಕೊಡುವ ಕನ್ಯೆಯ ಎಲ್ಲ ಲಕ್ಷಣಗಳೂ ಕವಿತೆಯಲ್ಲಿವೆ ಎಂದು ಶಬ್ದಚಮತ್ಕಾರದಿಂದ ಅವರು ತೊಂಬತ್ತೆಂಟನೆಯ ಪದ್ಯದಲ್ಲಿ ತೋರಿಸಿದ್ದಾರೆ.

ಸರ್ವಾಲಂಕಾರಯುಕ್ತಾಂ ಸರಲಪದಯುತಾಂ
ಸಾಧುವೃತ್ತಾಂ ಸುವರ್ಣಾಂ
ಸದ್ಭಿಃ ಸಂಸ್ತೂಯಮಾನಾಂ ಸರಸಗುಣಯುತಾಂ
ಲಕ್ಷಿತಾಂ ಲಕ್ಷಣಾಢ್ಯಾಮ್ ।
ಉದ್ಯದ್ಭೂಷಾವಿಶೇಷಾಮುಪಗತವಿನಯಾಂ
ದ್ಯೋತಮಾನಾರ್ಥರೇಖಾಂ
ಕಲ್ಯಾಣೀಂ ದೇವ ಗೌರಿಪ್ರಿಯ ಮಮ ಕವಿತಾಕನ್ಯಕಾಂ ತ್ವಂ ಗೃಹಾಣ॥

ಕವಿತೆಯಲ್ಲಿ ಎಲ್ಲ ಅಲಂಕಾರಗಳೂ ಉಪಮಾರೂಪಕಾದಿಗಳೂ ಇವೆ. ಕನ್ಯೆಯಲ್ಲಿ ಕಟಕಕುಂಡಲಾದಿ ಅಲಂಕಾರಗಳು ಇವೆ. ಕವಿತೆಯಲ್ಲಿ ಸರಳವಾದ ಪದಗಳಿವೆ. ಕನ್ಯೆಯಲ್ಲಿ ಸರಳ ಪದಗಳು, ಅಂದರೆ ನೇರವಾದ ಹೆಜ್ಜೆಗಳು ಇವೆ. ಕವಿತೆಯಲ್ಲಿ ಒಳ್ಳೆಯ ವೃತ್ತಗಳು ಎಂದರೆ ಶಿಖರಿಣೀ ಮುಂತಾದ ಛಂದಸ್ಸುಗಳಿವೆ. ಕನ್ಯೆಯಲ್ಲಿ ಒಳ್ಳೆಯ ವೃತ್ತ, ಎಂದರೆ ನಡತೆ ಇದೆ. ಇತ್ಯಾದಿಯಾಗಿ ಎಲ್ಲ ವಿಶೇಷಣಗಳೂ ಶ್ಲೇಷೆಯಿಂದ ಕವಿತೆಗೂ ಕನ್ಯೆಗೂ ಅನ್ವಯಿಸುತ್ತವೆ. ಆದ್ದರಿಂದ ಈ ಕವಿತಾಕನ್ಯೆಯನ್ನು ನೀನು ಸ್ವೀಕರಿಸಬೇಕೆಂದು ಕವಿಯ ಬಿನ್ನಪ.

ಹೀಗೆ ಶಿವಾನಂದಲಹರಿ ಉತ್ತಮ ಸ್ತೋತ್ರಕಾವ್ಯ. ವೇದಗಳಲ್ಲಿ ಗಾನಸಹಿತವಾದ ಮಂತ್ರಗಳನ್ನು ಸ್ತೋತ್ರಗಳೆಂದೂ, ಗಾನರಹಿತವಾದ ಮಂತ್ರಗಳನ್ನು ಶಸ್ತ್ರಗಳೆಂದೂ ಹೇಳುತ್ತಾರೆ. ಆದ್ದರಿಂದ ಸ್ತೋತ್ರಗಳನ್ನು ಮನಸಾರೆ ಹಾಡಿ, ಭಗವಂತನಲ್ಲಿ ಮನಸ್ಸನ್ನು ನಿಲ್ಲಿಸಬೇಕು. ಅರ್ಥಜ್ಞಾನವನ್ನು ಪಡೆದುಕೊಂಡು ಹಾಡಿದರೆ ಆಗ ಪೂರ್ಣಫಲ. ಗುಣ ಯಾರಲ್ಲಾದರೂ ವಸ್ತುತಃ ಇದ್ದಾಗ ಅದನ್ನು ಹೇಳಿದರೆ ಅದು ಸ್ತೋತ್ರ. **ಗುಣಿಗತಗುಣಾಭಿಧಾನಂ ಸ್ತುತಿಃ** – ಪರಮೇಶ್ವರನು ಸಕಲ ಗುಣಪರಿಪೂರ್ಣನಾದುದರಿಂದ ಭಗವತ್ ಸ್ತೋತ್ರಗಳು ಸಾರ್ಥಕ. ಕಾವ್ಯಗುಣಗಳ ದೃಷ್ಟಿಯಿಂದ ಪರಿಶೀಲಿಸಿದಾಗ ಶಿವಾನಂದಲಹರಿಯು ಕಾಳಿದಾಸನ ಕೃತಿಗಳಿಗಿಂತ ನ್ಯೂನವಾದುದೇನಲ್ಲ. ಭಕ್ತಿಯಲ್ಲಂತೂ ಇದೇ ಅತ್ಯುನ್ನತ. ಜ್ಞಾನಮಾರ್ಗವನ್ನು ಒತ್ತಿ ಹೇಳಿದ ಶ್ರೀಶಂಕರಾಚಾರ್ಯರು ಭಕ್ತಿಗೂ ಇಷ್ಟು ಪ್ರಾಮುಖ್ಯವನ್ನು ನೀಡಿ, ಸುಂದರ ಸ್ತೋತ್ರಕಾವ್ಯವನ್ನು ರಚಿಸಿ ಲೋಕಕ್ಕೆ ಉಪಕಾರವನ್ನು ಮಾಡಿದ್ದಾರೆ. ಅದನ್ನು ಭಕ್ತಿಯಿಂದ ಓದಿ ಧನ್ಯರಾಗೋಣ.